

بسم اللہِ الرّحمٰن الرّحيم

# ಅಲ್ಲಾಹನ ವಾಸ್ತವಿಕ ಸ್ವರೂಪ ಮತ್ತು ಅವನ ಮಹಿಮೆಗಳು

**(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಲಂಡನ್‌ನ 'ಬೈತುಲ್ ಫುತೂಹ್' ಮಸೀದಿಯಲ್ಲಿ ನೀಡಿದ ಶುಕ್ರವಾರದ ಖುತುಬದ ಸಾರಾಂಶ–** 18.04.2014)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ನಾನು ಈಗ ಅಲ್ಲಾಹನ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿರುವ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅಲ್ಲಾಹನ ವಾಸ್ತವಿಕ ಸ್ವರೂಪವೇನು? ಅವನ ಮಹಿಮೆಗಳು ಯಾವುವು? ಅಲ್ಲಾಹನು ಎಲ್ಲಾ ಶಕ್ತಿಗಳ ಒಡೆಯನಾಗಿದ್ದಾನೆ. ಅವನು ಏಕನಾಗಿದ್ದು ಎಲ್ಲವುಗಳನ್ನು ಸೃಷ್ಟಿಸಿದ ಸೃಷ್ಟಿಕರ್ತನೂ ಆಗಿದ್ದಾನೆ. ಎಲ್ಲಾ ವಸ್ತುಗಳು ನಾಶ ಹೊಂದುವುವು. ಆದರೆ ಅಲ್ಲಾಹನಿಗೆ ನಾಶವಿಲ್ಲ. ಅಲ್ಲಾಹನನ್ನು ಸಮೀಪಿಸಲು ಸಾಧ್ಯವಿರುವ ಏಕಮಾತ್ರ ಮಾರ್ಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೂಲಕವಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೂಲಕ ಮಾತ್ರ ಅಲ್ಲಾಹನನ್ನು ಸಮೀಪಿಸಬಹುದಾಗಿದೆ. ಅಲ್ಲಾಹನ ಸೌಂದರ್ಯ ಮತ್ತು ಔದಾರ್ಯ ಅಪ್ರತಿಮವಾಗಿದೆ. ಅಲ್ಲಾಹನ ಶಕ್ತಿ ಸಾಮರ್ಥ್ಯಗಳನ್ನು ದರ್ಶಿಸಲು ಅವನ ಕಡೆಗೆ ನಿಷ್ಠಾವಂತನಾಗಿ ಬಾಗುವುದು ಆವಶ್ಯಕವಾಗಿದೆ ಎಂದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ. ಅವನನ್ನು ಆರಾಧಿಸುವುದು ಆವಶ್ಯಕವಾಗಿದೆ. ಮನುಷ್ಯನು ಈ ಸ್ಥಿತಿಯನ್ನು ಹೊಂದಿದರೆ ಅಲ್ಲಾಹನು ಓಡಿ ಬಂದು ಮನುಷ್ಯನನ್ನು ತಬ್ಬಿಕೊಳ್ಳುತ್ತಾನೆ. ಮತ್ತು ಅವನ ಮೇಲೆ ತನ್ನ ಅನುಗ್ರಹಗಳ ಮಳೆ ಸುರಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ನೋವಿನಿಂದ ಹೀಗೆ ಹೇಳಿದರು: ನೀವು ನಿಮ್ಮ ಇಹಲೋಕ ಜೀವಿತವನ್ನೂ ಪರಲೋಕ ಜೀವಿತವನ್ನೂ ಉತ್ತಮ ಗೊಳಿಸಲಿಕ್ಕಾಗಿಅ ಂತಹ ಅಲ್ಲಾಹನೊಡನೆ ಗಾಢವಾದ ಸಂಬಂಧವನ್ನು ಸ್ಥಾಪಿಸಿರಿ.

ಅಲ್ಲಾಹನ ವಾಸ್ತವಿಕ ಸ್ವರೂಪದ ಬಗ್ಗೆ ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೀಗೆ ಹೇಳಿದರು:

ಅಲ್ಲಾಹನು ಆಕಾಶ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ. ಎಲ್ಲಾ ರೀತಿಯ ಪ್ರಕಾಶ ಅಲ್ಲಾಹನಿಂದಲೇ ಬರುತ್ತವೆ. ಎತ್ತರದಲ್ಲಿಯೂ ತಗ್ಗಿನಲ್ಲಿಯೂ ಕಾಣಿಸುವ ಪ್ರಕಾಶ, ಅದು ಆತ್ಮಗಳಲ್ಲಿರುವ ಪ್ರಕಾಶವಾಗಲಿ ಶರೀರಗಳಲ್ಲಿರುವ ಪ್ರಕಾಶವಾಗಲಿ, ಸ್ವಂತ ಪ್ರಕಾಶವಾಗಲಿ ಬಾಹ್ಯಪ್ರಕಾಶವಾಗಲಿ, ಬಹಿರಂಗ ಪ್ರಕಾಶವಾಗಲಿ ಅಂತರಂಗದ ಪ್ರಕಾಶವಾಗಲಿ, ಬುದ್ಧಿಯ ಪ್ರಕಾಶವಾಗಲಿ ಇನ್ನಿತರ ಯಾವುದೇ ಪ್ರಕಾಶವಾಗಲಿ ಎಲ್ಲವೂ ಅವನಿಂದಲೇ ಬರುತ್ತವೆ. ಶರೀರಗಳಲ್ಲಿ ಕಂಡು ಬರುವ ಪ್ರಕಾಶ ಅಲ್ಲಾಹನಿಂದಲೇ ಬರುವಂತಹದು ಆಗಿದೆ. ಸಕಲ ಲೋಕಗಳ ಪ್ರಭುವಾದ ಅಲ್ಲಾಹನ ಅನುಗ್ರಹಗಳು ಎಲ್ಲಾ ವಸ್ತುಗಳಿಗೂ ವ್ಯಾಪಿಸಿವೆ ಎಂಬುದಕ್ಕೆ ಇದು ಸೂಚನೆಯಾಗಿದೆ. ಯಾವುದೇ ವಸ್ತು ಅವನ ಅನುಗ್ರಹದಿಂದ ವಿರಹಿತವಾಗಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳುತ್ತಾರೆ:

ಪವಿತ್ರ ಖುರ್‌ಆನ್‌ನಲ್ಲಿ ನಮ್ಮ ದೇವನು ತನ್ನ ಗುಣ ವಿಶೇಷಗಳ ಬಗ್ಗೆ ಹೀಗೆ ಹೇಳಿದ್ದಾನೆ: **ಖುಲ್ ಹೂವಲ್ಲಾಹು ಅಹದ್, ಅಲ್ಲಾಹುಸ್ಸಮದ್, ಲಮ್‌ಯಲಿದ್ ವಲಮ್ ಯೂಲದ್ ವಲಮ್ ಯಕುಲ್ಲಹೂ ಕುಫ್‌ವನ್ ಅಹದ್ –** ಎಂದರೆ, ನಿಮ್ಮ ದೇವನು ತನ್ನ ಅಸ್ತಿತ್ವದಲ್ಲೂ ತನ್ನ ಗುಣ ವಿಶೇಷಗಳಲ್ಲೂ ಏಕಮಾತ್ರನಾಗಿದ್ದಾನೆ. ಅವನ ಹಾಗೆ ಅನಾದಿಯೂ ಅನಂತವೂ ಆಗಿರುವವನು ಬೇರೆ ಯಾರೂ ಇಲ್ಲ. ಯಾವುದೇ ವಸ್ತುವಿನ ಗುಣಗಳು ಅವನ ಗುಣಗಳ ಹಾಗೆ ಇಲ್ಲ. ಮನುಷ್ಯನಿಗೆ ಜ್ಞಾನ ಲಭಿಸಲು ಒಬ್ಬ ಅಧ್ಯಾಪಕನ ಆವಶ್ಯಕತೆ ಇದೆ. ಅವನಿಗೆ ದೊರಕುವ ಜ್ಞಾನವೂ ಸೀಮಿತವಾಗಿರುತ್ತದೆ. ಆದರೆ ಅಲಾಹನ ಜ್ಞಾನ ಯಾವುದೇ ಅಧ್ಯಾಪಕನ ಮೇಲೆ ಅವಲಂಬಿತವಾದುದಲ್ಲ. ಅದು ಸೀಮಾತೀತವಾಗಿದೆ. ಮನುಷ್ಯನಿಗೆ ಕಿವಿ ಕೇಳಿಸಲು ಗಾಳಿಯ ಆವಶ್ಯಕತೆ ಇದೆ. ಅದು ಸೀಮಿತವೂ ಆಗಿರುತ್ತದೆ. ಆದರೆ ಅಲ್ಲಾಹನ ಆಲಿಸುವ ಗುಣ ಅವನ ಸ್ವಂತ ಶಕ್ತಿಯದಾಗಿದ್ದು ಅದು ಸೀಮಿತವಾದುದಲ್ಲ. ಮನುಷ್ಯನು ಕಾಣಬೇಕಾದರೆ ಸೂರ್ಯನ ಅಥವಾ ಬೇರೆ ಪ್ರಕಾಶದ ಆಶ್ರಯ ಪಡೆಯಬೇಕಾಗಿದೆ. ಅದು ಸೀಮಿತವೂ ಆಗಿರುತ್ತದೆ. ಆದರೆ ಅಲ್ಲಾಹನು ಕಾಣುವುದು ಅವನ ಸ್ವಂತ ದೃಷ್ಟಿಯಿಂದಾಗಿದೆ. ಅದು ಸೀಮಾತೀತವೂ ಆಗಿರುತ್ತದೆ. ಅದೇರೀತಿ ಮನುಷ್ಯನು ಸೃಷ್ಟಿಸುವ ವಸ್ತುಗಳಿಗೆ ಮೂಲ ಪದಾರ್ಥಗಳ ಆವಶ್ಯಕತೆ ಇರುತ್ತದೆ. ಸಮಯದ ಆವಶ್ಯಕತೆಯೂ ಇರುತ್ತದೆ. ಅದು ಸಹ ಸೀಮಿತವಾಗಿರುತ್ತದೆ. ಆದರೆ ಅಲ್ಲಾಹನು ಸೃಷ್ಟಿಸುವುದಕ್ಕೆ ಯಾವುದೇ ಪದಾರ್ಥದ ಮತ್ತು ಸಮಯದ ಆವಶ್ಯಕತೆ ಇರುವುದಿಲ್ಲ. ಅವನ ಸೃಷ್ಟಿಸುವ ಗುಣ ಸೀಮಾತೀತವೂ ಆಗಿದೆ. ಅವನ ಎಲ್ಲಾ ಗುಣಗಳು ಅದ್ವಿತೀಯವಾಗಿವೆ. ಅವುಗಳಿಗೆ ಸಮವಾದುದು ಯಾವುದೂ ಇಲ್ಲ. ಅಲ್ಲಾಹನ ಯಾವುದಾದರು ಒಂದು ಗುಣವು ನ್ಯೂನತೆಯಿಂದ ಕೂಡಿದ್ದರೆ ಅವನ ಎಲ್ಲಾ ಗುಣಗಳಲ್ಲಿ ಸಹ ನ್ಯೂನತೆ ಉಂಟಾಗುವುದು. ಆದುದರಿಂದ ಅವನು ತನ್ನ ಅಸ್ತಿತ್ವದಲ್ಲಿ ಏಕನಾಗಿರುವ ಹಾಗೆ ಅವನ ಗುಣ ವಿಶೇಷಗಳು ಸಹ ಬೇರೆ ಯಾರಲ್ಲೂ ಇರದಂತಹವುಗಳೂ ಅವನಲ್ಲಿ ಮಾತ್ರ ಅಡಕವಾದವುಗಳೂ ಆಗಿವೆ.

ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳಲ್ಲಿ ಅಲ್ಲಾಹನು ತಾನು ಯಾರ ಮಗನೂ ಅಲ್ಲ. ಯಾರೂ ತನ್ನ ಮಗನಾಗಿಲ್ಲ ಎಂದು ಹೇಳಿರುವನು. ಏಕೆಂದರೆ ಅವನು ಯಾರ ಆಶ್ರಯವನ್ನೂ ಹೊಂದದವನಾಗಿದ್ದಾನೆ. ಅವನಿಗೆ ಪಿತನ ಆವಶ್ಯಕತೆಯಾಗಲೀ ಪುತ್ರನ ಆವಶ್ಯಕತೆಯಾಗಲೀ ಇಲ್ಲ.

ಅಲ್ಲಾಹನ ಏಕತ್ವದ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ವಿವರಿಸಲಾದ ವೈಚಾರಿಕ ಸಾಕ್ಷ್ಯಾಧಾರಗಳನ್ನು ಉಲ್ಲೇಖಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ನಂತರ ಅಲ್ಲಾಹನು ತಾನು **ವಹ್‌ದಹು ಲಾ ಶರೀಕ್** (ಏಕನೂ ಸಹಭಾಗಿ ಇಲ್ಲದವನೂ) ಆಗಿರುವೆನು ಎಂಬುದಕ್ಕೆ ವೈಚಾರಿಕ ಸುಬೂತು ನೀಡುತ್ತಾ ಈರೀತಿ ಹೇಳುತ್ತಾನೆ–

**ಲವ್ ಕಾನ ಫೀಹಿಮಾ ಆಲಿಹತನ್ ಇಲ್ಲಲ್ಲಾಹು ಲ ಫಸದತಾ**

ಅವೆರಡರಲ್ಲಿ (ಆಕಾಶ ಮತ್ತು ಭೂಮಿಯಲ್ಲಿ) ಅಲ್ಲಾಹನಲ್ಲದೆ ಬೇರೆ ದೇವರುಗಳು ಸಹ ಇರುತ್ತಿದ್ದರೆ ಅವೆರಡೂ ನಾಶವಾಗುತ್ತಿದ್ದುವು (ಪವಿತ್ರ ಖುರ್‌ಆನ್ ೨೧:೨೩)

**ವ ಮಾ ಕಾನ ಮಅಹೂ ಮಿನ್ ಇಲಾಹಿನ್**

ಅಲ್ಲಾಹನ ಜೊತೆಗೆ ಇನ್ನೊಬ್ಬ ದೇವನಿಲ್ಲ.

ಅಂದರೆ ಭೂಮ್ಯಾಕಾಶಗಳಿಗೆ ಪರಿಪೂರ್ಣ ಗುಣ ಸಂಪನ್ನನಾದ ಒಬ್ಬ ದೇವನ ಜೊತೆಗೆ ಇನ್ನೊಬ್ಬ ದೇವನಿರುತ್ತಿದ್ದರೆ ಅವರು ಪರಸ್ಪರ ಜಗಳವಾಡುತ್ತಿದ್ದರು. ಏಕೆಂದರೆ ಇಬ್ಬರು ದೇವರುಗಳು ಪರಸ್ಪರ ವಿರುದ್ಧವಾಗಿ ಕೆಲಸ ಮಾಡುವವರಾಗುತ್ತಿದ್ದರು. ಈ ವಿರೋಧ ವರ್ತನೆಗಳ ಕಾರಣದಿಂದ ಪ್ರಪಂಚದಲ್ಲಿ ನಾಶ ಸಂಭವಿಸುತ್ತಿತ್ತು. ಇಬ್ಬರು ಬೇರೆ ಬೇರೆ ಸೃಷ್ಟಿಕರ್ತರು ಇರುತ್ತಿದ್ದರೆ ಪ್ರತಿಯೊಬ್ಬ ದೇವನು ತನ್ನ ಸೃಷ್ಟಿಯ ಹಿತವನ್ನು ಬಯಸಿ ಅವರ ಸುಖ ಸಂತೋಷಗಳಿಗೋಸ್ಕರ ಇನ್ನೊಬ್ಬ ದೇವನ ಸೃಷ್ಟಿಗಳನ್ನು ನಾಶಗೊಳಿಸಲು ಪ್ರಯತ್ನಿಸುತ್ತಿದ್ದನು. ಇದರಿಂದ ಸಹ ಪ್ರಪಂಚದಲ್ಲಿ ಅಸ್ತವ್ಯಸ್ತತೆ ತಲೆದೋರುತ್ತಿತ್ತು. ಆದುದರಿಂದ ಒಬ್ಬನ ಹೊರತು ಬೇರೆ ದೇವನ ಪ್ರಶ್ನೆಯೇ ಉದ್ಭವಿಸುವುದಿಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಇಸ್ಲಾಮ್ ಧರ್ಮದ ಎಲ್ಲಾ ಆಜ್ಞೆಗಳ ಮುಖ್ಯ ಉದ್ದೇಶ ಇಸ್ಲಾಮ್ ಎಂಬ ಪದದಲ್ಲಿ ಅಡಕವಾಗಿರುವ ದೇವಾಸ್ತಿತ್ವದ ವಾಸ್ತವಿಕತೆಯ ಕಡೆಗೆ ಜನರನ್ನು ಕೊಂಡೊಯ್ಯುವುದಾಗಿದೆ. ಇದೇ ಉದ್ದೇಶವನ್ನು ಈಡೇರಿಸಲು ಪವಿತ್ರ ಖುರ್‌ಆನ್‌ನಲ್ಲಿ ಎಂತಹ ಉಪದೇಶಗಳಿವೆ ಎಂದರೆ ಅವು ದೇವನನ್ನು ನಮಗೆ ಪ್ರಿಯಕರನನ್ನಾಗಿ ಮಾಡಲು ಪ್ರಯತ್ನಿಸುತ್ತಿವೆ. ಅದರ ಕೆಲವು ವಚನಗಳು ಅಲ್ಲಾಹನ ಸೌಂದರ್ಯವನ್ನು ತೋರಿಸುತ್ತವೆ. ಬೇರೆ ಕೆಲವು ಅಲ್ಲಾಹನ ಅಲ್ಲಾಹನ ಔದಾರ್ಯಗಳನ್ನು ನಮಗೆ ನೆನಪಿಸಿ ಕೊಡುತ್ತವೆ. ಏಕೆಂದರೆ ಪ್ರೀತಿ ಹೃದಯದಲ್ಲಿ ಹುಟ್ಟುವುದು ಸೌಂದರ್ಯದ ಕಾರಣದಿಂದ ಅಥವಾ ಔದಾರ್ಯದ ಕಾರಣದಿಂದಾಗಿರುತ್ತದೆ. ಅಲ್ಲಾಹನು ಸಕಲ ಸೌಂದರ್ಯವಂತನೂ ಏಕನೂ ಸಹಭಾಗಿ ಇಲ್ಲದವನೂ ಆಗಿರುವನು. ಅವನಲ್ಲಿ ಯಾವ ನ್ಯೂನತೆಯೂ ಇರುವುದಿಲ್ಲ. ಅವನು ಸಕಲ ಪರಿಪೂರ್ಣ ಗುಣಗಳ ಸಂಗ್ರಹವಾಗಿದ್ದಾನೆ. ಅವನು ಎಲ್ಲಾ ಪರಿಶುದ್ಧ ಶಕ್ತಿ ಸಾಮರ್ಥ್ಯಗಳನ್ನು ಪ್ರಕಟಿಸುವವನಾಗಿದ್ದಾನೆ. ಅವನು ಎಲ್ಲಾ ಸೃಷ್ಟಿಗಳ ಸೃಷ್ಟಿಕರ್ತನಾಗಿದ್ದಾನೆ. ಅವನು ಎಲ್ಲಾ ಅನುಗ್ರಹಗಳ ಉದ್ಭವ ಸ್ಥಾನವಾಗಿದ್ದಾನೆ. ಅವನು ಶಿಕ್ಷೆ ಮತ್ತು ರಕ್ಷೆಯ ಒಡೆಯನಾಗಿದ್ದಾನೆ. ಎಲ್ಲವೂ ಅವನ ಕಡೆಗೆ ಮರಳುತ್ತವೆ. ಅವನು ದೂರವಾಗಿದ್ದರೂ ಸಮೀಪವಾಗಿಯೇ ಇದ್ದಾನೆ. ಅವನು ಸಮೀಪವಾಗಿದ್ದರೂ ದೂರವಾಗಿಯೇ ಇದ್ದಾನೆ. ಅವನು ಎಲ್ಲರಿಗಿಂತಲೂ ಮೇಲೆ ಇದ್ದಾನೆ. ಆದರೆ ಅವನ ಕೆಳಗೆ ಬೇರೊಬ್ಬನಿದ್ದಾನೆಂದು ಹೇಳಲಾಗದು. ಅವನು ಎಲ್ಲಾ ವಸ್ತುಗಳಿಗಿಂತಲೂ ರಹಸ್ಯವಾಗಿ ಇರುವವನಾಗಿದ್ದಾನೆ. ಆದರೆ ಅವನಿಗಿಂತ ಹೆಚ್ಚು ಪ್ರಕಟಗೊಳ್ಳುವವ ಬೇರೊಬ್ಬನಿದ್ದಾನೆಂದು ಹೇಳಲಾಗದು. ಅವನು ಸ್ವತಃ ಜೀವಂತವಾಗಿರುವವನಾಗಿದ್ದಾನೆ. ಅವನು ಇತರರನ್ನು ಜೀವಂತವಾಗಿಡುವವನಾಗಿದ್ದಾನೆ. ಅವನು ಸ್ವತಃ ನೆಲೆನಿಂತವನೂ ಪ್ರತಿಯೊಂದು ವಸ್ತುವನ್ನು ನೆಲೆನಿಲ್ಲಿಸುವವನೂ ಆಗಿದ್ದಾನೆ. ಅವನು ಪ್ರತಿಯೊಂದು ವಸ್ತುವನ್ನು ಎತ್ತಿಕೊಂಡಿರುತ್ತಾನೆ. ಆದರೆ ಅವನನ್ನು ಎತ್ತಿಕೊಂಡಿರುವಂತಹದು ಯಾವುದೂ ಇಲ್ಲ. (ಅಂದರೆ ಪ್ರತಿಯೊಂದು ವಸ್ತುವಿನ ಅಸ್ತಿತ್ವ ಅಲ್ಲಾಹನನ್ನು ಆಶ್ರಯಿಸಿಕೊಂಡಿರುತ್ತದೆ) ಅಲ್ಲಾಹನ ಸಹಾಯವಿಲ್ಲದೆ ಸ್ವತಃ ಅಸ್ತಿತ್ವಕ್ಕೆ ಬಂದುದು ಯಾವುದೂ ಇಲ್ಲ. ಅವನ ಸಹಾಯವಿಲ್ಲದೆ ಸ್ವತಃ ಜೀವಿಸಲು ಸಾಧ್ಯವಿರುವಂತಹದು ಯಾವುದೂ ಇಲ್ಲ. ಅಲ್ಲಾಹನು ಪ್ರತಿಯೊಂದು ವಸ್ತುವನ್ನು ಆವರಿಸಿದ್ದಾನೆ. ಆದರೆ ಹೇಗೆ ಆವರಿಸಿದ್ದಾನೆಂದು ಹೇಳಲಾರೆವು. ಆಕಾಶ ಮತ್ತು ಭೂಮಿಯ ಪ್ರತಿಯೊಂದು ವಸ್ತುವಿನ ಪ್ರಕಾಶ ಅವನೇ ಆಗಿದ್ದಾನೆ. ಪ್ರತಿಯೊಂದು ಪ್ರಕಾಶ ಅವನ ಕೈಗಳ ಮೂಲಕವೇ ಬೆಳಗಿಸಲ್ಪಟ್ಟಿತು. ಪ್ರತಿಯೊಂದು ಪ್ರಕಾಶ ಅಲ್ಲಾಹನ ಪ್ರಕಾಶದ ಪ್ರತಿಬಿಂಬವೇ ಆಗಿದೆ. ಅವನು ಸಕಲ ಲೋಕಗಳ ಪಾಲಕ ಪೋಷಕನಾಗಿದ್ದಾನೆ. ಸ್ವತಃ ಜನಿಸಿದಂತಹ ಹಾಗೂ ಅವನಿಂದ ಪಾಲನೆ ಪೋಷಣೆ ಪಡೆಯದಂತಹ ಯಾವುದೇ ಆತ್ಮವೂ ಇಲ್ಲ. ಅವನಿಂದ ದೊರಕಿರದಂತಹ ಶಕ್ತಿ ಯಾವುದೇ ಆತ್ಮಕ್ಕೂ ಲಭಿಸಿಲ್ಲ.

ಅಲ್ಲಾಹನ ಅನುಗ್ರಹಗಳು ಎರಡು ವಿಧಗಳಲ್ಲಿವೆ. ಒಂದು ವಿಧದ ಅನುಗ್ರಹ ಯಾರೂ ಪರಿಶ್ರಮಪಡದೆ ಪುರಾತನ ಕಾಲದಿಂದ ಜಾರಿಯಲ್ಲಿರುವಂಥದ್ದು. ಉದಾಹರಣೆಗೆ ಭೂಮಿ, ಆಕಾಶ, ಸೂರ್ಯ, ಚಂದ್ರ, ನಕ್ಷತ್ರಗಳು, ನೀರು, ಬೆಂಕಿ, ಗಾಳಿ ಮತ್ತು ನಮ್ಮ ಸುಖಕ್ಕೋಸ್ಕರ ಸೃಷ್ಟಿಸಲ್ಪಟ್ಟ ಇತರ ವಸ್ತುಗಳು. ನಮಗೆ ಯಾವ್ಯಾವ ವಸ್ತುಗಳು ಆವಶ್ಯಕವಾಗಿದ್ದುವೋ ಅವುಗಳನ್ನೆಲ್ಲಾ ನಾವು ಹುಟ್ಟುವುದಕ್ಕೆ ಮೊದಲೇ ನಮಗೋಸ್ಕರ ಒದಗಿಸಿಡಲಾಗಿತ್ತು. ನಾವು ಅಸ್ತಿತ್ವಕ್ಕೆ ಬರುವ ಮೊದಲೇ ಇವುಗಳನ್ನೆಲ್ಲಾ ಸೃಷ್ಟಿಸಲಾಗಿತ್ತು. ಆಗ ನಾವು ಇವುಗಳಿಗೋಸ್ಕರ ಪರಿಶ್ರಮ ಮಾಡಿರಲಿಲ್ಲ. ನನ್ನ ಸತ್ಕರ್ಮಗಳ ಕಾರಣದಿಂದ ಸೂರ್ಯನು ಸೃಷ್ಟಿಸಲ್ಪಟ್ಟನು ಎಂದು ಹೇಳಲು ಯಾರಿಗೆ ತಾನೆ ಸಾಧ್ಯ? ಭೂಮಿ ನನ್ನ ಪರಿಶುದ್ಧ ಕರ್ಮದ ಕಾರಣದಿಂದ ಸೃಷ್ಟಿಸಲ್ಪಟ್ಟಿತೆಂದು ಹೇಳಲು ಯಾರಿಗಾದರೂ ಸಾಧ್ಯವೇ?

ಒಟ್ಟಿನಲ್ಲಿ, ಇವುಗಳೆಲ್ಲಾ ಮನುಷ್ಯನು ಕೆಲಸ ಪ್ರಾರಂಭಿಸುವ ಮೊದಲೇ ಸೃಷ್ಟಿಸಲ್ಪಟ್ಟವು. ಅವುಗಳು ಯಾರದಾದರೂ ಸತ್ಕರ್ಮಗಳ ಫಲಸ್ವರೂಪವಾಗಿ ನೀಡಲ್ಪಟ್ಟವುಗಳಲ್ಲ.

ಅಲ್ಲಾಹನು ನೀಡುವ ಇನ್ನೊಂದು ವಿಧದ ಅನುಗ್ರಹ ಮನುಷ್ಯನ ಕರ್ಮಕ್ಕೆ ಸಂಬಂಧಪಟ್ಟದ್ದಾಗಿದೆ. ಒಳ್ಳೆಯ ಕೆಲಸಕ್ಕೆ ಒಳ್ಳೆಯ ಪ್ರತಿಫಲ ಲಭಿಸುತ್ತದೆ.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಈ ಕಾಲಘಟ್ಟದಲ್ಲಿ ಅಲ್ಲಾಹನ ಸಾಮೀಪ್ಯ ಗಳಿಸಲು ಇರುವ ಒಂದೇ ಒಂದು ಮಾರ್ಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಾಗಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೀಗೆ ಹೇಳುತ್ತಾರೆ:

''ಸರ್ವಶಕ್ತನೂ ಸತ್ಯಸ್ವರೂಪನೂ ಪರಿಪೂರ್ಣನೂ ಆಗಿರುವ ಈ ಸತ್ಯ ದೇವನಿಗೆ ನಮ್ಮ ಆತ್ಮ ಮತ್ತು ನಮ್ಮ ಶರೀರದ ಕಣ ಕಣಗಳೂ ಸಾಷ್ಟಾಂಗ ಪ್ರಣಾಮ ಮಾಡುತ್ತಿವೆ. ಅವನ ಕೈಯಿಂದ ಪ್ರತಿಯೊಂದು ಆತ್ಮ ಮತ್ತು ಸೃಷ್ಟಿಗಳ ಪ್ರತಿಯೊಂದು ಕಣವೂ ಅದರ ಎಲ್ಲಾ ಶಕ್ತಿಗಳೊಂದಿಗೆ ಅಸ್ತಿತ್ವಕ್ಕೆ ಬಂತು. ಅಲ್ಲಾಹನ ಅಸ್ತಿತ್ವದಿಂದಲೇ ಪ್ರತಿಯೊಂದು ವಸ್ತು ನೆಲೆನಿಂತಿದೆ. ಯಾವುದೇ ವಸ್ತು ಅವನ ಜ್ಞಾನಕ್ಕೆ ಹೊರತಾಗಿ ಇರುವುದಿಲ್ಲ. ಅವನ ನಿಯಂತ್ರಣಕ್ಕೊಳಗಾಗದ ಮತ್ತು ಅವನ ಸೃಷ್ಟಿಗೆ ಹೊರತಾಗಿರುವಂತಹದು ಯಾವುದೂ ಇಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಸಾವಿರಾರು ದುರೂದುಗಳು ಮತ್ತು ಶಾಂತಿ ಸುರಿಯಲ್ಪಡಲಿ – ಅವರ ಮೂಲಕವೇ ನಾವು ಜೀವಂತನಾಗಿರುವ ಈ ಸತ್ಯದೇವನ ಚಿಹ್ನೆಗಳನ್ನು ಕಂಡೆವು. ಅವನು ತನ್ನ ವಚನಗಳನ್ನು ಅವತೀರ್ಣಗೊಳಿಸಿ ತನ್ನ ಅಸ್ತಿತ್ವದ ಚಿಹ್ನೆಯನ್ನು ನಮಗೆ ತೋರಿಸುತ್ತಾನೆ. ಅವನು ಸ್ವತಃ ಅಸಾಧಾರಣವಾದ ಚಿಹ್ನೆಗಳನ್ನು ತೋರಿಸಿ ತನ್ನ ಪುರಾತನವಾದ ಮತ್ತು ಪರಿಪೂರ್ಣವಾದ ಶಕ್ತಿ ಸಾಮರ್ಥ್ಯಗಳ ಪ್ರಕಾಶಮಾನವಾದ ವದನವನ್ನು ತೋರಿಸಿಕೊಡುತ್ತಾನೆ. ನಾವು ಎಂತಹ ಸಂದೇಶವಾಹಕರನ್ನು ಪಡೆದೆವು ಎಂದರೆ ಅವರು ನಮಗೆ ದೇವನನ್ನು ತೋರಿಸಿಕೊಟ್ಟರು. ನಾವು ಎಂತಹ ದೇವನನ್ನು ಪಡೆದೆವೆಂದರೆ ಅವನು ತನ್ನ ಪರಿಪೂರ್ಣ ಶಕ್ತಿಯಿಂದ ಪ್ರತಿಯೊಂದು ವಸ್ತುವನ್ನು ಸೃಷ್ಟಿಸಿದವನಾಗಿದ್ದಾನೆ. ಅವನ ಶಕ್ತಿ ಎಷ್ಟು ವೈಭವ ಶಾಲಿಯಾಗಿದೆಯೆಂದರೆ, ಅದರ ಮೂಲಕ ಹೊರತು ಯಾವುದೇ ವಸ್ತು ಅಸ್ತಿತ್ವಕ್ಕೆ ಬರಲಿಲ್ಲ. ಅವನ ಸಹಾಯವಿಲ್ಲದೆ ಯಾವುದೇ ವಸ್ತು ನೆಲೆನಿಲ್ಲಲಾರದು. ನಮ್ಮ ಆ ಸತ್ಯ ದೇವನು ಎಣಿಸಲಾಗದಷ್ಟು ಅನುಗ್ರಹಗಳ ಒಡೆಯನಾಗಿದ್ದಾನೆ. ಅವನು ಎಣಿಸಲಾಗದಷ್ಟು ಶಕ್ತಿಯನ್ನು ಹೊಂದಿರುವನು. ಅವನು ಎಣಿಸಲಾಗದಷ್ಟು ಸೌಂದರ್ಯ ಭರಿತನೂ ಎಣಿಸಲಾಗದಷ್ಟು ಔದಾರ್ಯವಂತನೂ ಆಗಿರುವನು. ಅವನ ಹೊರತು ಅನ್ಯದೇವನಿಲ್ಲ.''

ಅಲ್ಲಾಹನ ಅಸ್ತಿತ್ವವನ್ನು ನಂಬದವರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಅಲ್ಲಾಹನು ಅದೃಶ್ಯರಲ್ಲಿ ಅದೃಶ್ಯನಾಗಿರುವನು. ಅವನು ಅತ್ಯಂತ ಸೂಕ್ಷ್ಮವಾಗಿರುವವನೂ ಅತ್ಯಂತ ರಹಸ್ಯವಾಗಿ ಇರುವವನೂ ಆಗಿದ್ದಾನೆ. ಮನುಷ್ಯನಿಗೆ ತನ್ನ ಬುದ್ಧಿಶಕ್ತಿಯ ಬಲದಿಂದ ಅವನನ್ನು ಪತ್ತೆ ಹಚ್ಚಲು ಸಾಧ್ಯವಾಗದು. (ಅಲ್ಲಾಹನು ರಹಸ್ಯವಾಗಿರುವವನಾಗಿದ್ದಾನೆ. ಕೇವಲ ಬುದ್ಧಿಶಕ್ತಿಯನ್ನು ಮಾತ್ರ ಬಳಸಿ ಅವನ ಅಸ್ತಿತ್ವವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ) ಯಾವುದೇ ವೈಚಾರಿಕ ಸಾಕ್ಷ್ಯಾಧಾರ ಅವನ ಅಸ್ತಿತ್ವದ ಬಗ್ಗೆ ಅಖಂಡನೀಯ ಸಾಕ್ಷ್ಯಾಧಾರ ನೀಡಲಾರದು. ಯಾಕೆಂದರೆ, ಬುದ್ಧಿಶಕ್ತಿಯ ಸಾಮರ್ಥ್ಯ ಎಷ್ಟರ ಮಟ್ಟಿಗೆ ಇದೆ ಎಂದರೆ ಅದು ಈ ಪ್ರಪಂಚದಲ್ಲಿರುವ ಸೃಷ್ಟಿಗಳನ್ನು ನೋಡಿ ಒಬ್ಬ ಸೃಷ್ಟಿಕರ್ತನ ಆವಶ್ಯಕತೆಯನ್ನು ಮನವರಿಕೆ ಮಾಡಿಕೊಳ್ಳಬಹುದಷ್ಟೆ. (ಎಂದರೆ ಬುದ್ಧಿಶಕ್ತಿ ಹೇಗಿರುವುದೆಂದರೆ ಒಂದು ವಸ್ತುವನ್ನು ನೋಡಿ ಅದನ್ನು ಯಾರು ನಿರ್ಮಿಸಿದರು ಎಂದು ಹೇಳಲು ಮಾತ್ರ ಅದಕ್ಕೆ ಸಾಧ್ಯವಾಗುವುದು). ಆದರೆ ಒಬ್ಬ ನಿರ್ಮಾಪಕನಿರುವನೆಂದು ಕೇವಲ ಮನವರಿಕೆ ಮಾಡಿಕೊಳ್ಳುವುದು ಮತ್ತು ನಿರ್ಮಾಪಕನು ಖಂಡಿತವಾಗಿಯೂ ಇರುವನೆಂದು ಅನುಭವ ಜ್ಞಾನದಿಂದ ತಿಳಿದುಕೊಳ್ಳುವುದು ಬೇರೆ ಬೇರೆ ವಿಷಯವಾಗಿದೆ. ಬುದ್ಧಿ ಬಳಸುವ ವಿಧಾನ ನ್ಯೂನತೆಯಿಂದ ಕೂಡಿರುತ್ತದೆ. ಅಪೂರ್ಣವಾಗಿಯೂ ಸಂದೇಹಕರವೂ ಆಗಿರುತ್ತದೆ. ಆದುದರಿಂದ ಪ್ರತಿಯೊಬ್ಬ ದಾರ್ಶನಿಕನು ಕೇವಲ ಬುದ್ಧಿಶಕ್ತಿಯನ್ನು ಬಳಸಿ ದೇವನನ್ನು ಗುರುತಿಸಲಾರನು. ಬುದ್ಧಿಶಕ್ತಿಯನ್ನು ಬಳಸಿ ದೇವನ ಅಸ್ತಿತ್ವವನ್ನು ಗೊತ್ತು ಹಚ್ಚಲು ಪ್ರಯತ್ನಿಸುವವರಲ್ಲಿ ಬಹುತೇಕ ಜನರು ಕೊನೆಗೆ ನಾಸ್ತಿಕರಾಗುತ್ತಾರೆ.

ದೇವನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸಹೊಂದಿ ಮನುಷ್ಯನು ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ತನ್ನ ಶ್ರದ್ಧೆಯನ್ನು ಅಲ್ಲಾಹನ ಕಡೆಗೆ ಮಾತ್ರ ಇರಿಸುವಂತೆ ಆಗಬೇಕೆಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ನೋವಿನೊಂದಿಗೆ ಹೀಗೆ ಹೇಳುತ್ತಾರೆ:

''ನಮ್ಮ ದೇವನಲ್ಲಿ ಎಣಿಸಲಾಗದಷ್ಟು ಅದ್ಭುತಗಳಿವೆ. ಆದರೆ ಸತ್ಯದಿಂದಲೂ ನಿಷ್ಠೆಯಿಂದಲೂ ಅವನಿಗೆ ಸೇರಿದವರಾಗುವವರು ಮಾತ್ರ ಅವುಗಳನ್ನು ಕಾಣುತ್ತಾರೆ. ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಬಗ್ಗೆ ದೃಢನಂಬಿಕೆ ಇಲ್ಲದವರಿಗೆ ಮತ್ತು ಅವನಿಗೆ ಸತ್ಯವಾಗಿಯೂ ನಿಷ್ಠರಾಗಿಲ್ಲದವರಿಗೆ ಅವನು ತನ್ನ ಅದ್ಭುತಗಳನ್ನು ತೋರಿಸಿಕೊಡುವುದಿಲ್ಲ. ಪ್ರತಿಯೊಂದು ಕೆಲಸ ಮಾಡಲು ಶಕ್ತಿ ಸಾಮರ್ಥ್ಯಗಳನ್ನು ಹೊಂದಿದ ಒಬ್ಬ ದೇವನಿದ್ದಾನೆಂದು ಇಷ್ಟರ ತನಕ ತಿಳಿದುಕೊಳ್ಳದ ಮನುಷ್ಯನು ಎಷ್ಟು ದುರದೃಷ್ಟಶಾಲಿಯಾಗಿದ್ದಾನೆ. ನಮ್ಮ ಸ್ವರ್ಗ ನಮ್ಮ ದೇವನಾಗಿದ್ದಾನೆ. ನಮ್ಮ ಎಲ್ಲಾ ಶ್ರೇಷ್ಠ ಅಭಿರುಚಿಗಳು ನಮ್ಮ ದೇವನಲ್ಲಿವೆ. ಯಾಕೆಂದರೆ ನಾವು ಅವನನ್ನು ನೋಡಿದ್ದೇವೆ. ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿದ್ದೇವೆ. ಜೀವವನ್ನು ಅರ್ಪಿಸಿದರೆ ಸಿಗುವಂತಹದಾಗಿದ್ದರೆ ಆ ಸಂಪತ್ತು ಗಳಿಸಲು ಯೋಗ್ಯವಾಗಿದೆ. ನಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಮೂಲಕ ಲಭಿಸುವುದಾದರೆ ಕೂಡ ಈ ಮಾಣಿಕ್ಯ ಹಾಗೆ ಖರೀದಿಸಲು ಯೋಗ್ಯವಾಗಿದೆ. ಓ ಭಾಗ್ಯಹೀನರೇ, ಈ ನೀರ ಝರಿಯ ಕಡೆಗೆ ಓಡಿ ಬನ್ನಿರಿ. ಅದು ನಿಮ್ಮ ದಾಹವನ್ನು ನಿವಾರಿಸುವುದು. ಇದು ನಿಮ್ಮನ್ನು ರಕ್ಷಿಸುವ ಜೀವಜಲದ ಕಾರಂಜಿಯಾಗಿದೆ. ನಾನು ಏನು ಮಾಡಲಿ. ಈ ಶುಭವಾರ್ತೆಯನ್ನು ಜನರ ಹೃದಯಗಳಲ್ಲಿ

ತಳವೂರುವಂತೆ ಹೇಗೆ ಮಾಡಲಿ? ನಿಮ್ಮ ದೇವನು ಇವನು ಎಂದು ಯಾವ ತಮಟೆ ಬಾರಿಸಿ ನಾನು ಡಂಗುರ ಸಾರಲಿ. ಮತ್ತು ಜನರು ಆಲಿಸುವಂತೆ ಮಾಡಲಿ. ಜನರ ಕಿವಿಗಳು ಆಲಿಸುವಂತಾಗಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ.''

ಈ ಕಾಲಘಟ್ಟದ ಇಮಾಮರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯವಂತರಾದ ದಾಸರೂ ಆಗಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅನುಸರಿಸುತ್ತಾ ಈ ಜೀವಂತ ದೇವನ ಸಂದೇಶವನ್ನು ಲೋಕಕ್ಕೆ ತಲಪಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ. ಜೀವಂತನಾಗಿರುವ ಒಬ್ಬ ದೇವನಿದ್ದಾನೆಂದು ಲೋಕದ ಜನರಿಗೆ ಮನವರಿಕೆ ಮಾಡಿಕೊಡಲು ನಮಗೆ ಸಾಧ್ಯವಾಗಲಿ. ಅವನು ಈಗ ಸಹ ಆಲಿಸುತ್ತಾನೆ ಮತ್ತು ತನ್ನ ದೃಷ್ಟಾಂತಗಳನ್ನು ತೋರಿಸುತ್ತಾನೆ. ಅವನ ಕಡೆಗೆ ತಿರುಗಿರಿ. ಅವನ ಕಡೆಗೆ ಬನ್ನಿರಿ. ನಾವು ಆ ಜೀವಂತ ದೇವನೊಂದಿಗೆ ಜೀವಂತ ಸಂಬಂಧವನ್ನು ಸ್ಥಾಪಿಸುವವರಾಗೋಣ. ಮತ್ತು ನಮಗೆ ನೀಡಲಾದ ಉಪದೇಶಗಳನ್ನು ಅನುಸರಿಸುವವರಾಗೋಣ. ಅಲ್ಲಾಹನ ಆರಾಧನೆಯ ಹಕ್ಕುಗಳನ್ನು ಈಡೇರಿಸುವವರಾಗೋಣ. ಅಲ್ಲಾಹನ ವಿಶೇಷಗುಣಗಳ ಬಗ್ಗೆ ಸರಿಯಾದ ಜ್ಞಾನ ಗಳಿಸುವವರಾಗೋಣ. ಅವನ ಅನುಗ್ರಹಗಳಿಗೆ ನಾವು ವಾರೀಸುದಾರರಾಗೋಣ. ನಮ್ಮ ಸಂತಾನ ಮತ್ತು ನಾವು ಸಹ ಯಾವಾಗಲೂ ಬಹುದೇವಾರಾಧನೆಯಿಂದ ಎಲ್ಲಾ ರೀತಿಗಳಲ್ಲೂ ಸುರಕ್ಷಿತರಾಗೋಣ – ಆಮೀನ್.

---------------*****---------------

*Friday Sermon delivered by Hadrath Khaleefathul Masih Al Khamis(atba)*
*at Masjid Baithul Futhuh, London on 18-04-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

***Published By:*** Kannada Isha'at Team, *Ahmadiyya Muslim Jama`at, Karnataka*

**Contact Us**:
Darussalam, Ahmadiyya Muslim Mission,
Behind Deltawest Building, Near Railway Level Crossing,
Pandeshwar, Mangalore – 575 001

*Email*: **khutuba.kannada@gmail.com**